ಸಾವಳಗಿಯಲ್ಲಿ ಸಮುದಾಯ ಆರೋಗ್ಯ ಕೇಂದ್ರದ ಸ್ಥಾಪನೆ ಕುರಿತು

೧೬೮ (೫೫) ಶ್ರೀ ಬಾಬುರೆಡ್ಡಿ ತುಂಗಳ್ (ಬೀಳಗಿ).—ಮಾನ್ಯ ಆರೋಗ್ಯ ಮತ್ತು ಅಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಜಮಖಂಡಿ ತಾಲ್ಲೂಕಿನ ಸಾವಳಗಿ ಗ್ರಾಮದಲ್ಲಿ ಸಮುದಾಯ ಆರೋಗ್ಯ ಕೇಂದ್ರ ಆರಂಭಿಸುವ ವಿಚಾರ ಯಾವ ಹಂತದಲ್ಲಿದೆ ?

ಆ) ಹಾಗಿದ್ದಲ್ಲಿ, ಸಮುದಾಯ ಆರೋಗ್ಯ ಕೇಂದ್ರವನ್ನು ಸಾವಳಗಿ ಗ್ರಾಮದಿಂದ ಬೇರೆಡೆಗೆ ವರ್ಗಾಯಿಸುವ ವಿಚಾರವೇನಾದರೂ ಇದೆಯೇ ?

ಇ) ಹಾಗಿದ್ದಲ್ಲಿ, ಯಾವ ಕಾರಣಕ್ಕಾಗಿ ?

ಶ್ರೀ ಹೆಚ್.ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಅಬ್ಕಾರಿ ಮಂತ್ರಿಗಳು).—

ಅ) ಭಾರತ ಜನಸಂಖ್ಯಾ ಯೋಜನೆ-೩ರ ಅಡಿಯಲ್ಲಿ ಸಾವಳಗಿ ಗ್ರಾಮದಲ್ಲಿ ಸಮುದಾಯ ಆರೋಗ್ಯ ಕೇಂದ್ರವನ್ನು ಆರಂಭಿಸುವ ವಿಚಾರವಿಲ್ಲ.

ಆ) ಸಮುದಾಯ ಆರೋಗ್ಯ ಕೇಂದ್ರವನ್ನು ಸಾವಳಗಿ ಗ್ರಾಮದಿಂದ ರಬಕವಿ ಬನಹಟ್ಟಿಗೆ ಈಗಾಗಲೇ ವರ್ಗಾಯಿಸಲಾಗಿದೆ.

ಇ) ಸಾವಳಗಿ ಗ್ರಾಮದಲ್ಲಿ ಈಗಾಗಲೇ ಆರು ಹಾಸಿಗೆಗಳ ಪ್ರಾಥಮಿಕ ಆರೋಗ್ಯ ಕೇಂದ್ರವಿದೆ. ಇದು ಆ ಗ್ರಾಮದ ಜನತೆಗೆ ಆರೋಗ್ಯ ಸೇವೆಯನ್ನು ಒದಗಿಸುತ್ತಿದೆ. ರಬಕವಿ ಬನಹಟ್ಟಿಯಲ್ಲಿ ಹೆಚ್ಚಿನ ಜನಸಂಖ್ಯೆಯಿದ್ದು ಅಲ್ಲಿನ ಅವಶ್ಯಕತೆಗನುಗುಣವಾಗಿ ಸಮುದಾಯ ಆರೋಗ್ಯ ಕೇಂದ್ರವನ್ನು ವರ್ಗಾಯಿಸಲಾಗಿದೆ.

ಮಕ್ಕಳ ಅಪಹರಣದ ಬಗ್ಗೆ

೧೭೦ (೪೬ ಬಿ) ಶ್ರೀ ಗೋಪಾಲ ಮುಕುಂದ ಕಾನಡೆ (ಸಿಸಿಐ).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ೧೯೮೫–೮೬ನೇ ಸಾಲಿನಲ್ಲಿ ರಾಜ್ಯದಲ್ಲಿ ಕಾಣೆಯಾದ ಮಕ್ಕಳ ಒಟ್ಟು ಸಂಖ್ಯೆ ಎಷ್ಟು ?

ಆ) ಆ ಪೈಕಿ ಎಷ್ಟು ಮಂದಿ ಮಕ್ಕಳನ್ನು ಪತ್ತೆ ಹಚ್ಚಲಾಗಿದೆ ಹಾಗೂ ಇನ್ನೂ ಪತ್ತೆ ಹಚ್ಚಬೇಕಾದ ಮಕ್ಕಳ ಸಂಖ್ಯೆ ಎಷ್ಟು, ಮತ್ತು ಆ ಬಗ್ಗೆ ಕೈಗೊಂಡ ಕ್ರಮವೇನು ?

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು).—

	೧೯೮೫	೧೯೮೬
ಅ) ಕಾಣೆಯಾದ ಮಕ್ಕಳ ಸಂಖ್ಯೆ	೨೫೯೧	೨೫೪೬
ಆ) ಪತ್ತೆ ಹಚ್ಚಿದ ಸಂಖ್ಯೆ	೨೩೦೭	೨೧೬೧
ಪತ್ತೆ ಹಚ್ಚಬೇಕಾದ ಮಕ್ಕಳ ಸಂಖ್ಯೆ	೨೮೪	೩೮೫

ಇನ್ನೂ ಪತ್ತೆಯಾಗದೆ ಉಳಿದಿರುವ ಮಕ್ಕಳನ್ನು ಪತ್ತೆ ಹಚ್ಚಲು ಆಕಾಶವಾಣಿ ಹಾಗೂ ಲಭ್ಯವಿರುವ ಮಕ್ಕಳ ಭಾವಚಿತ್ರಗಳೊಂದಿಗೆ ಪ್ರಸಾರ ಮಾಡಲಾಗುತ್ತಿದೆ.

ರಾಜ್ಯದಲ್ಲಿ ಸಾರಾಯಿ ಹೆಂಡ ಮದ್ಯ ಮಾರಾಟದ ಬಗ್ಗೆ

೧೭೧ (೮೨) ಶ್ರೀ ಆರ್. ವೆಂಕಟರಾಮಯ್ಯ (ಮಂಗಳಬಾಗಲು).—ಮಾನ್ಯ ಆರೋಗ್ಯ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ರಾಜ್ಯದಲ್ಲಿ ಒಂದು ವಾರದಲ್ಲಿ ಸರಾಸರಿ ಎಷ್ಟು ಹೆಂಡ, ಸಾರಾಯಿ, ಹಾಗೂ ಇತರೆ ಮದ್ಯಪಾನೀಯಗಳನ್ನು ಮಾರಾಟ ಮಾಡಲಾಗುತ್ತಿದೆ ?